ವಿದ್ಯಾಭ್ಯಾಸದ ಇಲಾಖೆ.

ಸ್ರ 1890ನೇ ಇಸವಿ ಸೆಪ್ಟಂಬರ್ ತಾರೀಖು 23.

ಇದರಡಿ ಕಂಡ ಪುಸ್ತಕಗಳು ಈ ಕೆಳಗೆ ವಿವರಿಸಲ್ಪಟ್ಟಿರುವ ಪ್ರಕಾರ ಉಪಯೋಗಿಸಲ್ಪಡಲು ಯೋಗ್ಯವೆಂದು ಎಣಿಸಲ್ಪಟ್ಟಿವೆ.

ಪುಸ್ತಕದ ಹೆಸರು.	ಗ್ರಂಥಕರ್ತ ಅಥವಾ ಫಾಯಿಷ್ ಮಾಡುವವರ ಹೆಸರು.	ಮಾರಲ್ಪಡುವ ಸ್ಥಳ.	ಕ್ರಯ.			ಯಾವರೀತಿಯಿಂದ ಉಪಯೋಗಿಸಲ್ಪಡಲು ಯೋಗ್ಯವಾಗಿವೆ.
			ರೂ.	ಆ.	ಪೈ.	
ಮಹಾಭಾರತದ ಸಭಾಪರ್ವ	ಮೈಸೂರಲ್ಲಿರುವ ಜಗನ್ಮೋಹನ ಮುದ್ರಾಕ್ಷರಶಾಲೆ	ಬೆಂಗಳೂರಲ್ಲಿರುವ ಸೆಂಟ್ರಲ್ ಬುಕ್‌ಡಿಪೊ ಅಥವಾ ಮೈಸೂರಲ್ಲಿರುವ ಜಗನ್ಮೋಹನ ಮುದ್ರಾಕ್ಷರ ಶಾಲೆ	1	4	0	ದೇಶಭಾಷಾ ಪಾಠಶಾಲೆಗಳಲ್ಲಿ ಇನಾಮು ಪುಸ್ತಕವಾಗಿ ಉಪಯೋಗಿಸಲ್ಪಡಲು ಯೋಗ್ಯವಾಗಿದೆ.
ಮಹಾಭಾರತದ ಕರ್ಣಪರ್ವ.	ಡಿಟೋ	ಡಿಟೋ	1	12	0	ಡಿಟೋ
ಚರಿತ್ರ ಸಂಗ್ರಹ ಕನ್ನಡ ಭಾಷೆಯಲ್ಲಿ ಸಂಕ್ಷೇಪವಾಗಿ ಬರೆಯಲ್ಪಟ್ಟಿರುವ ಹಿಂದೂದೇಶ ಚರಿತ್ರೆ	ಎಂ. ಬಿ. ಶ್ರೀನಿವಾಸ ಅಯ್ಯಂಗಾರ್ ಬಿ. ಎ. ಮತ್ತು ಎಂ. ಎಸ್. ಪುಟ್ಟಣ್ಣ ಬಿ. ಎ.	ಸೆಂಟ್ರಲ್ ಬುಕ್ ಡಿಪೊ ಅಥವಾ ಗ್ರಂಥಕರ್ತರು.	0	5	0	ದೇಶಭಾಷಾ ಪಾಠಶಾಲೆಗಳ ಕೆಳಗಿನ ತರಗತಿಗಳಲ್ಲಿ ಟೆಕ್ಸ್ಟ್ ಅಂದರೆ ಪಾಠಶಾಲೆಯ ಗ್ರಂಥವಾಗಿ ಉಪಯೋಗಿಸಲ್ಪಡಲು ಯೋಗ್ಯವಾಗಿದೆ.
ಚರಿತ್ರದರ್ಪಣ ಕನ್ನಡಭಾಷೆಯಲ್ಲಿ ವಿಸ್ತಾರವಾಗಿ ಬರೆಯಲ್ಪಟ್ಟಿರುವ ಹಿಂದೂದೇಶಚರಿತ್ರೆ Iನೆಯ ಭಾಗ	ಡಿಟೋ	ಡಿಟೋ	0	6	0	ದೇಶಭಾಷಾ ಪಾಠಶಾಲೆಗಳ ಮೇಲಿನ ತರಗತಿಗಳಲ್ಲಿ ಟೆಕ್ಸ್ಟ್ ಅಂದರೆ ಪಾಠಶಾಲೆಯ ಗ್ರಂಥವಾಗಿ ಉಪಯೋಗಿಸಲ್ಪಡಲು ಯೋಗ್ಯವಾಗಿದೆ.
ಡಿಟೋ IIನೆಯ ಭಾಗ	ಡಿಟೋ	ಡಿಟೋ	0	6	0	ಡಿಟೋ
ನೀತಿಚಿಂತಾಮಣಿ ನೀತಿ ಬೋಧಕವಾದ ಪುಸ್ತಕ Iನೆಯ ಭಾಗ	ಡಿಟೋ	ಡಿಟೋ	0	4	0	ದೇಶಭಾಷಾ ಪಾಠಶಾಲೆಗಳಲ್ಲಿ ವಚನ ಕಾವ್ಯ ಗ್ರಂಥ ಪುಸ್ತಕವಾಗಿ ಉಪಯೋಗಿಸಲ್ಪಡಲು ಯೋಗ್ಯವಾಗಿದೆ.
ಡಿಟೋ IIನೆಯ ಭಾಗ	ಡಿಟೋ	ಡಿಟೋ	0	3	0	ಡಿಟೋ
ಡಿಟೋ IIIನೆಯ ಭಾಗ	ಡಿಟೋ	ಡಿಟೋ	0	4	0	ಡಿಟೋ

ಕೆಲವು ಗ್ರಂಥಕರ್ತರು ತಮ್ಮ ಪುಸ್ತಕಗಳನ್ನ ಸರ್ಕಾರಿ ಮತ್ತು ಇತರ ಪಾಠಶಾಲೆಗಳಲ್ಲಿ ಉಪಯೋಗಿಸಲು ಯೋಗ್ಯವಾಗಿವೆ ಎಂದು ತಮ್ಮ ಪುಸ್ತಕಗಳ ಟೀಕಿಕೆಗಳಲ್ಲಿ ಸರ್ಕಾರದಿಂದ ಅಧಿಕಾರವನ್ನು ಪಡಿಯದೆ ಅಧಿಕಾರವನ್ನು ಹೊಂದಿದಂತೆಯೇ ಛಾಪಿಸಿರುತ್ತಾರೆ. ಆದ್ದರಿಂದ ಸಕಲಜನಗಳಿಗೂ ಇದರಿಂದ ತಿಳಿಯಪಡಿಸುವದೇನಂದರೆ, ಮೇಲ್ಕಂಡಂತೆ ಸರ್ಕಾರೀ ಗೆಜೆಟ್ಟಿನಲ್ಲಿ ಇಸ್ತಿಹಾರ್‌ನಾಮೇ ಮೂಲಕ ಫಾಯಿಷ್ ಮಾಡದೇ ಇರುವ ಯಾವ ಪುಸ್ತಕವನ್ನಾದರೂ ಸ್ಕೂಲ್‌ಗಳಲ್ಲಿ ಉಪಯೋಗಿಸಲು ಯೋಗ್ಯವಾದದ್ದೆಂದು ತಿಳಿಯಕೂಡದು.

ಜೆಹ್. ಜೆ. ಛಾಛ್ಮಾ, ಎಂ. ಎ.
ಎಜ್ಯುಕೇಷನ್ ಸೆಕ್ರಿಟರಿ.

ನಂದೀದುರ್ಗ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1890ನೇ ಇಸವಿ ಮಿಸಲೇನಿಯಸ್ ನಂಬರ್ 73.

ಅರ್ಜೀದಾರ್.
1ನೇ ಜಿಲ್ಲಾ ಫಟ್ಟದಲ್ಲಿರುವ ನಂಜಪ್ಪನ ಮಗ ಖಾದ್ರಪ್ಪ
2ನೇ ಕೃಷ್ಣಶಾಸ್ತ್ರಿ

ಕೌಂಟರ್ ಅರ್ಜೀದಾರ್.
ಜಿಲ್ಲಾ ಫಟ್ಟದ ವೇಣುಗೋಪಾಲ ಕೃಷ್ಣ ಸಹಾಯ ಕಂಪೆನಿ ಪ್ರಸಿಡೆಂಟ್ ವೆಂಕಟನಾರಣಪ್ಪ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಅರ್ಜೀದಾರ್ರು ಸದರೀ ಕಂಪೆನಿ ಮೆಂಬರುಗಳೆಂತಲೂ ಕಂಪೆನಿಯಲ್ಲಿ 1,000 ಮೆಂಬರುಗಳು ಇದ್ದದ್ದು ಈಗ 100 ಮೆಂಬರುಗಳು ಇದ್ದಾರೆಂತಲೂ ಕಂಪೆನಿ ರೂಲ್ಸ್ ಪ್ರಕಾರ ಇರತಕ್ಕ ಮೆಂಬರುಗಳಿಗೆ ಸಹಾಯ ಕೊಡಲು ಕಂಪೆನಿಗೆ ಶಕ್ತಿ ಸಾಲದೆಂತಲೂ ಮೆಂಬರು